## ಜನತಾ ಜೀವವೈವಿಧ್ಯ ದಾಖಲಾತಿ

ಜೈವಿಕವೈವಿಧ್ಯ ಅಧಿನಿಯಮ ೨೦೦೨ರ ನಿಯಮ ೨೨ರಂತೆ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಮುಖ್ಯ ಚಟುವಟಿಕೆ ಜನತಾ ಜೀವವೈವಿಧ್ಯ ದಾಖಲಾತಿಗಳನ್ನು ರಾಷ್ಟ್ರೀಯ ಜೀವವೈವಿಧ್ಯದ ಪ್ರಾಧಿಕಾರ ಹಾಗೂ ರಾಜ್ಯ ಜೀವವೈವಿಧ್ಯ ಮಂಡಳಿಯ ತಾಂತ್ರಿಕ ಸಲಹಾ ಗುಂಪುಗಳ ಮಾರ್ಗದರ್ಶನದೊಂದಿಗೆ ಹಾಗೂ ಸ್ಥಳೀಯ ಜನರ ಸಮಾಲೋಚನೆಯೊಂದಿಗೆ ತಯಾರಿಸುವುದು.ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆಯ ಮುಖ್ಯ ಉದ್ದೇಶವು ಸ್ಥಳೀಯ ಜೀವವೈವಿಧ್ಯದ ಮತ್ತು ಸ್ಥಳೀಯ ಸಮುದಾಯದ ಸಾಂಪ್ರದಾಯಿಕ ಜ್ಞಾನ ಹಾಗೂ ಸಾಂಪ್ರದಾಯಿಕ ಬಳಕೆಗಳ ಸಂರಕ್ಷಣೆ ಕುರಿತು ವರದಿ ತಯಾರಿಸುವುದು.

## ಜನತಾ ಜೀವವೈವಿಧ್ಯ ದಾಖಲಾತಿ ತಯಾರಿಕೆಯ ಹಂತಗಳು

1. ಜೀವವೈವಿಧ್ಯ ನಿರ್ವಹಣಾ ಸಮಿತಿಯ ರಚನೆ.
2. ಸಾರ್ವಜನಿಕರಿಗೆ ಅಧ್ಯಯನದ ಸಮೀಕ್ಷೆ ಹಾಗೂ ಅಗತ್ಯ ನಿರ್ವಹಣೆ ಬಗ್ಗೆ ಅರಿವು ಮೂಡಿಸುವುದು.
3. ಜೈವಿಕ ಸಂಪನ್ಮೂಲಗಳ ಗುರುತಿಸುವಿಕೆ, ಮಾಹಿತಿ ಸಂಗ್ರಹಣೆ ಹಾಗೂ ಸಾಂಪ್ರದಾಯಿಕ ಜ್ಞಾನದ ಬಗ್ಗೆ ಸದಸ್ಯರಿಗೆ ಅರಿವು ಮೂಡಿಸುವುದು.
4. **ಮಾಹಿತಿ ಸಂಗ್ರಹಣೆ:** ಮಾಹಿತಿ ಸಂಗ್ರಹಣೆಯು ಸಂಬಂಧಪಟ್ಟ ಜಿಲ್ಲೆಯ ನೈಸರ್ಗಿಕ ಸಂಪನ್ಮೂಲಗಳ ಮೇಲಿನ ಸಾಹಿತ್ಯದ ವಿಮರ್ಶೆ ಗ್ರಾಮೀಣ ಸಹಭಾಗಿತ್ವ, ಕೌಟುಂಬಿಕ ಸಮೀಕ್ಷೆ, ಗ್ರಾಮ ಮುಖಂಡರು ಹಾಗೂ ತಜ್ಞರೊಂದಿಗೆ ವೈಯಕ್ತಿಕ ಸಮಾಲೋಚನೆ, ಕುಟುಂಬದ ಮುಖ್ಯಸ್ಥರು, ಪಂಚಾಯತ್ ರಾಜ್ ಸಂಸ್ಥೆಯ ಮುಖ್ಯಸ್ಥರು ಹಾಗೂ ಸರ್ಕಾರೇತರ ಸಂಸ್ಥೆಗಳ ಸಂದರ್ಶನ ಹಾಗೂ ನೇರ ಕ್ಷೇತ್ರ ವಿಮರ್ಶೆ.
5. ತಾಂತ್ರಿಕ ಸಲಹಾ ಸಮಿತಿಗಳು ಹಾಗೂ ಜೀವವೈವಿಧ್ಯ ನಿರ್ವಹಣಾ ಸಮಿತಿಯೊಂದಿಗೆ ಸಮಾಲೋಚಿಸಿ ಸಂಗ್ರಹಿಸಿದ ಮಾಹಿತಿಗಳ ವಿಶ್ಲೇಷಣೆ ಹಾಗೂ ಮೌಲ್ಯಮಾಪನ.
6. ಜನತಾ ಜೀವವೈವಿಧ್ಯ ದಾಖಲಾತಿಗಳ ತಯಾರಿಕೆ

**ವರ್ಷವಾರು ತಯಾರಿಸಿದ ಜನತಾ ಜೀವವೈವಿಧ್ಯ ದಾಖಲಾತಿ**

| ಕ್ರ. ಸಂ | ವರ್ಷ | ಗ್ರಾ.ಪಂ ಮಟ್ಟ | ತಾ.ಪಂ ಮಟ್ಟ | ಜಿ.ಪಂ ಮಟ್ಟ |
|---|---|---|---|---|
| 1 | 2003 -2004 | - | - | - |
| 2 | 2004 -2005 | - | - | - |
| 3 | 2005 -2006 | - | - | - |
| 4 | 2006 -2007 | - | - | - |
| 5 | 2007 -2008 | - | - | - |
| 6 | 2008 -2009 | 43 | - | - |
| 7 | 2009 -2010 | 74 | - | - |
| 8 | 2010 -2011 | 96 | - | - |
| 9 | 2011 -2012 | 24 | - | - |
| 10 | 2012 -2013 | 36 | - | - |
| 11 | 2013 -2014 | 30 | - | - |
| 12 | 2014 -2015 | 141 | - | - |
| 13 | 2015 -2016 | 573 | 20 | - |
| 14 | 2016 -2017 | 337 | - | - |
| 15 | 2017 -2018 | 400 | 03 | - |
| 16 | 2018 -2019 | 191 | 1 | - |
| | ಒಟ್ಟು | 1945 | 24 | - |
| | **ಒಟ್ಟಾರೆ** | **1969** | | |




**ಸೂಚನೆ:** 5 ಜಿಲ್ಲಾ ಮಟ್ಟದ ಜನತಾ ಜೀವವೈವಿಧ್ಯ ದಾಖಲಾತಿಗಳು ಪ್ರಗತಿಯಲ್ಲಿವೆ.